**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ.13412/2014**

**ಚಾಸಾ-6 ಪ್ರಾಸಾ-3**

| | |
|---|---|
| **ಸಾಕ್ಷಿದಾರರ ಹೆಸರು** | **ಎಂ.ಎ ರವಿಕುಮಾರ್** |
| **ತಂದೆಯ ಹೆಸರು** | **ಅಪ್ಪಾಜಿ** |
| **ವಯಸ್ಸು** | **37 ವರ್ಷ** |
| **ಉದ್ಯೋಗ** | **ಪಿ.ಐ ಡಿ.ಜಿ ಅಂಡ್ ಐಜಿ ಆಫೀಸ್** |
| **ವಾಸ** | **ಬೆಂಗಳೂರು** |

**ದಿ. 20.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ದಿನಾಂಕ 07.12.2012 ರಿಂದ 27.06.2016 ರ ವರೆಗೆ ತಿಲಕ್ ನಗರ ಪೊ. ಠಾಣೆಯಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ 04.05.2013 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ.1 ರವರು ನನ್ನ ಹಾಗೂ ನಮ್ಮ ಸಿಬ್ಬಂದಿ ಚಾಸಾ.7, 8 ರವರನ್ನು ಕರೆದು ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಬಂದಿರುವುದಾಗಿ ತಿಳಿಸಿ ನಂತರ ಠಾಣೆಗೆ ಪಂಚರನ್ನು ಬರಮಾಡಿಕೊಂಡು ಅವರಿಗೆ ದಾಳಿ ಬಗ್ಗೆ ಮಾಹಿತಿ ತಿಳಿಸಿ ಇಲಾಖಾ ವಾಹನದಲ್ಲಿ ನಮ್ಮನ್ನು ಮತ್ತು ಪಂಚರನ್ನು ಜೊತೆಗೆ ಕರೆದುಕೊಂಡು ಮಾಹಿತಿ ಬಂದ ಸ್ಥಳವಾದ ಬೈರಸಂದ್ರ ಕೆರೆ ಬಳಿ ಖಾಲಿ ಜಾಗದ ಹತ್ತಿರ ಒಂದು ಸ್ಥಳದಲ್ಲಿ ನನ್ನ ಜೀಪ್ ನ್ನು ನಿಲ್ಲಿಸಿ, ಚಾಸಾ.1 ರವರು ಚಾಸಾ.7 ರವರಿಗೆ ಒಂದು 100 ರೂ. ನೋಟನ್ನು ನೀಡಿ ಅದರ ನಂ. 2 ಆರ್ ಡಿ 424886 ನೋಟಿನ ಮೇಲೆ ಚಾಸಾ.1 ರವರು ಸಹಿ ಮಾಡಿ ಸದರಿ ನೋಟನುನ ಉಪಯೋಗಿಸಿ ಗಾಂಜಾ ಮಾರಾಟ ಮಾಡುತ್ತಿರುವ ವ್ಯಕ್ತಿಯಿಂದ ಗಾಂಜಾ ಖರೀದಿ ಮಾಡಿಕೊಂಡು ಬರುವಂತೆ ಮಧ್ಯಾಹ್ನ 02 ಗಂಟೆಯ ಸಮಯದಲ್ಲಿ ಕಳುಹಿಸಿದ್ದು ಸ್ವಲ್ಪ ಸಮಯದ ನಂತರ ಚಾಸಾ.7 ರವರು ಚಾಸಾ.1 ರವರು ನೀಡಿದ 100 ರೂ.ಗಳಿಂದ ಒಂದು ಪೊಟ್ಟಣವನ್ನು ಖರೀದಿ ಮಾಡಿ ಚಾಸಾ.1 ರವರ ಮುಂದೆ ನೀಡಿದ್ದು ಸದರಿ ಪೊಟ್ಟಣವನ್ನು ಚಾಸಾ.1 ರವರು ಬಿಚ್ಚಿ ನೋಡಿದಾಗ ಅದರಲ್ಲಿ ಮಾದಕ ವಸ್ತುವಾದ ಮತ್ತು ತೇವಾಂಶ ದಿಂದ ಕೂಡಿದ ಗಾಂಜಾ

ಇತ್ತು. ಸದರಿ ಅಸಾಮಿ ಗಾಂಜಾ ಮಾಹಿತಿ ಮಾರಟ ಮಾಡುತ್ತಿದ್ದುನ್ನು ಖಚಿತ ಪಡಿಸಿಕೊಂಡು ಚಾಸಾ.1 ರವರು ಮತ್ತು ನಾವು ಸದರಿ ಅಸಾಮಿಗಳ ಮೇಲೆ ದಾಳಿ ಮಾಡಿ, ಅವರನ್ನು ಹಿಡಿದಿದ್ದು, ಆ ಪೈಕಿ ಮಾದೇಶ್ ಎಂಬುವನ ಬಳಿ ಒಂದು ಬಟ್ಟೆ ಬ್ಯಾಗ್ ಇದ್ದು, ಆಗ ಅವರ ಬಳಿಯಿದ್ದ ಬ್ಯಾಗ್ ಗಳನ್ನು ಶೋದನೆ ಮಾಡಲು ಚಾಸಾ.1 ರವರು ನಮ್ಮ ಮೈಕೋ ಲೇಔಟ್ ಸಹಾಯಕ ಇನ್ಸ್ ಪೆಕ್ಟರ್ ರವರಾದ ವೀರಭದ್ರೆಗೌಡ ಎಂಬುವರಿಗೆ ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿ, ಅಂಗಶೋದನೆ ಮಾಡಲು ಅವರಿಗೆ ಬರುವಂತೆ ಕೋರಿದ್ದು, ಅದಕ್ಕೆ ಅವರು ಚಾಸಾ.1 ರವರ ಶೋದನೆ ಮಾಡಬಹುದು ಎಂದು ತಿಳಿಸಿದ್ದಕ್ಕೆ ಅವರ ಆದೇಶದ ಮೇರೆಗೆ ಚಾಸಾ.1 ರವರು ಪಂಚರ ಸಮಕ್ಷಮ 1 ನೇ ಆರೋಪಿತನ ಬಳಿಯಿದ್ದ ಬ್ಯಾಗನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ತಲಾ ಅಂದಾಜು 25 ಗ್ರಾಂ ನ 7 ಗಾಂಜಾ ಪ್ಯಾಕೇಟ್‌ಗಳು ಇದ್ದವು ಮತ್ತು 300 ರೂ. ಹಣ ಇದ್ದು ಆ ಪೈಕಿ ಚಾಸಾ.1 ರವರು ಸಹಿ ಮಾಡಿದ ಒಂದು ನೋಟ್ ಸಹ ಇತ್ತು. ಅದೇ ರೀತಿ ಎರಡನೇ ಆರೋಪಿ ಕಾರ್ತಿಕ್ ಎಂಬುವರ ಬಳಿ ಅಂದಾಜು 15-25 ಗ್ರಾಂ ತೂಕದ 3 ಗಾಂಜಾ ಪ್ಯಾಕೆಟ್ ಗಳು ಇದ್ದು, ಆತನ ಬಳಿ 200 ರೂ. ಹಣ ಇತ್ತು. ಸಿಬ್ಬಂದಿಗಳ ಸಹಾಯದಿಂದ ತೂಕದ ಯಂತ್ರವನ್ನು ತರಿಸಿಕೊಂಡು ಸದರಿ ಗಾಂಜಾವನ್ನು ತೂಕ ಮಾಡಲಾಗಿ ಸುಮಾರು 200 ಗ್ರಾಂ ಗಾಂಜಾ ಸಿಕ್ಕಿರುತ್ತದೆ. ಆ ಪೈಕಿ 25 ಗ್ರಾಂ ನಷ್ಟು ತೂಕದ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡು ಮಧ್ಯಾಹ್ನ 2 ರಿಂದ 03.45 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ನಂತರ ಆರೋಪಿ ಮತ್ತು ಮಾಲಿನ ಸಮೇತ ಠಾಣೆಗೆ ಹಾಜರಾಗಿ ಆರೋಪಿತನ ವಿರುದ್ಧ ದೂರು ದಾಖಲು ಮಾಡಿರುತ್ತಾರೆ. ಪಂಚನಾಮೆಯನ್ನು ನೋಡುತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಚಾಸಾ.1 ರವರು ಆ ದಿನ ಅಮಾನತ್ತು ಪಡಿಸಿಕೊಂಡ ಗಾಂಜಾ, ಬ್ಯಾಗ್ ಮತ್ತು 500 ರೂ ಹಣ ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಈಗಾಗಲೇ ಎಂದು ಗುರುತಿಸಲಾಗಿದೆ. ಆರೋಪಿತರನ್ನು ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು : ಶ್ರೀ ಕೆ.ಜಿ.ಎಸ್. ಒಂದನೇ ಆರೋಪಿ ಪರ ವಕೀಲರಿಂದಃ**

ನಮ್ಮ ಇನ್ಸ್ ಪೆಕ್ಟರ್ ರವರು ನಮ್ಮನ್ನು ಕರ್ತವ್ಯಕ್ಕೆ ನೇಮಕ ಮಾಡುವುದಿಲ್ಲ. ಚಾಸಾ.1 ರವರಿಗೆ ಮಾಹಿತಿ ಬಂದಾಗ ನಾನು ಠಾಣೆಯಲ್ಲೆ ಇದ್ದೆ. ಗುನ್ನಾ ಸ್ಥಳದಲ್ಲಿ ಯಾವುದೇ ಕರೆಂಟ್ ವ್ಯವಸ್ಥೆ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾಳಿ ವೇಳೆಗೆ ದಾಳಿಗೆ ಅವಶ್ಯಕವಾದ ವಸ್ತುಗಳು ಮತ್ತು ಲ್ಯಾಪ್ ಟಾಪ್ ನ್ನು ತೆಗೆದುಕೊಂಡು ಹೋಗಿದ್ದೇವು. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ನಿಪಿ.1 ನ್ನು ನಮ್ಮ ಸಿಬ್ಬಂದಿ ಜಗದೀಶ್ವರೀ ಎಂಬುವರು ಟೈಪ್ ಮಾಡಿರುತ್ತಾರೆ. ಸದರಿ

ವಿಚಾರವನ್ನು  ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನಿಪಿ.1 ನ್ನು ನಮ್ಮ ಪೋರ್ಟಬಲ್ ಪ್ರಿಂಟರ್ ನಿಂದ ಪ್ರಿಂಟ್ ಮಾಡಿಸಿರುತ್ತೇವೆ. ಅದಕ್ಕೆ ಕರೆಂಟ್ ಅವಶ್ಯಕತೆ ಇರುವುದಿಲ್ಲ.  ಅದನ್ನು ತೆಗೆದವರ ಹೆಸರು ಈಗ ನನಗೆ ನೆನಪಿರುವುದಿಲ್ಲ. ನಾನು ಯಾವುದೆ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ನ್ನು ಠಾಣೆಯಲ್ಲಿ ತಯಾರು ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಂದ ವಶಪಡಿಸಿಕೊಂಡ ಇತರೆ ನಂ. ನೋಟ್ ಗಳು ನನಗೆ ಗೊತ್ತಿರುವುದಿಲ್ಲ. ಆರೋಪಿತರ ಬಳಿ ಸಿಕ್ಕ ಪ್ಯಾಕೆಟ್ ನಲ್ಲಿ ನಿಖರವರಗಿ ಎಷ್ಟೆಷ್ಟು ಗಾಂಜಾ ಇತ್ತು ಎಂದು ಹೇಳು ಬರುವುದಿಲ್ಲ ಆದರೆ ಒಟ್ಟು 200 ಗ್ರಾಂ ಗಾಂಜಾ ಸಿಕ್ಕಿರುತ್ತದೆ. ನಾನು ಯಾವುದೇ ಆರೋಪಿತರನ್ನು ಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳದೇ ಇದ್ದರೂ ಸುಳ್ಳು ಸಾಕ್ಷಿ  ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ  ಸವಾಲು : ಶ್ರೀ  ಕೆ.ಜಿ.ಎಸ್.  ಎರಡನೇ ಆರೋಪಿ ಪರ ವಕೀಲರಿಂದಃ</u>**

ನಿಪಿ.1 ಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

**<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>**

**ಓ.ಹೇ.ಕೇ.ಸ.ಇದೆ**

**37 ನೇ ಎ.ಸಿ.ಎಂ.ಎಂ**